ಸಂವಿಧಾನದಲ್ಲಿ ಘೋಷಿಸಿಕೊಂಡ ದಲಿತ ಸಂಘರ್ಷ ಸಮಿತಿ (ಡಿಎಸ್ಸೆಸ್) ಕನ್ನಡದಲ್ಲಿ ಹಿಂದೆಂದೂ ಇಲ್ಲದ ತತ್ವ, ಸಿದ್ಧಾಂತ, ಮೀಮಾಂಸೆಯನ್ನು ಧ್ಯೇಯೋದ್ದೇಶವಾಗಿರಿಸಿಕೊಂಡು ಆ ಮೂಲಕ ಕೇವಲ ಕರ್ನಾಟಕ, ಭಾರತಕ್ಕೆ ಮಾತ್ರ ಸಲ್ಲದೆ, ಇಡೀ ಜಗತ್ತಿಗೆ ಸಲ್ಲುವಂತಹ ಹೊಸ ಸಮಾಜವಾದಿ ಕಲಾಮೀಮಾಂಸೆಯೊಂದನ್ನು ಕನ್ನಡದಲ್ಲಿ ಮಂಡಿಸಿದ್ದು, ಅವರಿಗೆ ಚಾರಿತ್ರಿಕವೆನಿಸದಿರುವುದು ಸೋಜಿಗವೆನಿಸುತ್ತದೆ. ಆ ಕಲಾಮೀಮಾಂಸೆಯನ್ನು ಕೇವಲ ದಲಿತರು ಮಾತ್ರವಲ್ಲದೆ, ದಲಿತೇತರರು ಕೂಡ ಗಂಭೀರವಾಗಿ ಪರಿಗಣಿಸಿದ್ದಿದ್ದರೆ ಅದು ನಂತರದ ಐದು ದಶಕಗಳಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ವಿಮರ್ಶೆಯನ್ನು ಸಂಪೂರ್ಣವಾಗಿ ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿತ್ತು. ಆದರೆ, ಹಾಗೆ ಆಗದೇ ಹೋದದ್ದು ವಿಪರ್ಯಾಸ. ಅದಕ್ಕೆ ಕಾರಣಗಳು ಇಲ್ಲದಿಲ್ಲ.

ಮೊದಲಿಗೆ, ದಲಿತ ಅನ್ನುವ ಪರಿಕಲ್ಪನೆಯನ್ನು ಸಂಕುಚಿತಗೊಳಿಸಿಕೊಂಡಿದ್ದು. ದಲಿತ ಎಂದರೆ, ದಮನಿತ ಸಮುದಾಯಗಳು ಗೌರವ, ಘನತೆಗಾಗಿ ಒಗ್ಗೂಡಿ ಪಡೆದುಕೊಂಡ ಗುರುತು ಎಂಬುದು ನಿಜವೇ ಆದರೂ, ಅದರೊಡಲಲ್ಲಿರುವುದು ಸೆಕ್ಯುಲರ್ ಆಧುನಿಕತೆಯೇ ಹೊರತು ಜಾತಿಗುರುತಲ್ಲ, ಹಾಗೆಯೇ, ರಾಜಕೀಯ ಹಕ್ಕಲ್ಲ. ಹಾಗಾಗಿ, ಜನಾಳ್ವಿಕೆಯ, ಉದಾರವಾದಿ ನೆಲೆಯಲ್ಲಿ ತಳಸಮುದಾಯಗಳ ಗೌರವ, ಘನತೆ, ಸಮಾನತೆಯ ಹಕ್ಕಿಗಾಗಿ ಹೋರಾಡುವ ಮಾನವರೆಲ್ಲರೂ ಆ ಗುರುತನ್ನು ತಮ್ಮದಾಗಿಸಿಕೊಳ್ಳಬಹುದಿತ್ತು. ಕಳೆದ ದಶಕದಲ್ಲಿ ನಾವು ಅಂತಹ ಬೆಳವಣಿಗೆಯನ್ನು ಕಂಡಿದ್ದೇವೆ ಕೂಡ. ಐದು ದಶಕಗಳ ನಂತರವೂ ಇಂದು ಯಾವುದೇ ವಿಮೋಚನಾ ಹೋರಾಟ, ಪ್ರತಿಭಟನೆ, ಚಳವಳಿಯಲ್ಲೂ ಸಿದ್ದಲಿಂಗಯ್ಯನವರ "ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು" ಗೀತೆ ಮೊಳಗುವುದಕ್ಕೆ ಕಾರಣ, ಅದರಲ್ಲಿರುವ ಸೆಕ್ಯುಲರ್ ಮೌಲ್ಯವೇ ಹೊರತು ಮತ್ತೇನಲ್ಲ. ಅಹಿಂದ ಮೇಲಿನ ದೌರ್ಜನ್ಯದ ಸಂದರ್ಭದಲ್ಲಿ ಇಂತಹ ಹಾಡುಗಳು ಸ್ಫೂರ್ತಿ ತುಂಬುವುದಕ್ಕೂ, ಅಂಬೇಡ್ಕರ್ ಭಾವಚಿತ್ರ ಎಲ್ಲೆಡೆ ಕಾಣಿಸಿಕೊಳ್ಳುವುದಕ್ಕೂ ಅದೇ ಕಾರಣ.

ಎರಡನೆಯದಾಗಿ, ದಲಿತ ಚಳವಳಿಯನ್ನು ಅಸ್ಪೃಶ್ಯ ಜಾತಿವರ್ಗಗಳ ಹೋರಾಟವೆಂದಷ್ಟೇ ಭಾವಿಸಿದ ಹಾಗೆ, ದಲಿತ ಸಾಹಿತ್ಯವನ್ನು ಕೂಡ ಹಾಗೆಯೇ ಭಾವಿಸಿದ್ದು. ಕಾರ್ಲ್ ಮಾರ್ಕ್ಸ್, ವಿಶ್ವದಲ್ಲಿನ ವರ್ಗ ಸಂಘರ್ಷವನ್ನು ನೋಡುವ ಬಗೆಯನ್ನು ತೋರಿಸಿಕೊಟ್ಟ ಹಾಗೆ, ಅಂಬೇಡ್ಕರ್, ಭಾರತದಲ್ಲಿನ ಜಾತಿ ಸಂಘರ್ಷವನ್ನು ನೋಡುವ ಬಗೆಯನ್ನು ತೋರಿಸಿಕೊಟ್ಟದ್ದಷ್ಟೇ ಮುಖ್ಯವಾಗಿದ್ದಿದ್ದರೆ, ರಾವ್ ಅವರು ಸೂಚಿಸುವ ಸಮಾಜವಾದಿ ವಿಮರ್ಶಕ ವರ್ಗ ಹಾಗೂ ಜಾತಿ ಸಂಘರ್ಷವನ್ನು ಗಂಭೀರವಾಗಿ ಪರಿಗಣಿಸಬೇಕಿತ್ತು. ಹಾಗೆ ಮಾಡಿದ್ದಿದ್ದಲ್ಲಿ, ಕನ್ನಡ ವಿಮರ್ಶೆ ನವಉದಾರವಾದಿ ಸಂದರ್ಭದಲ್ಲಿ ಬೇರೆಯದೇ ಸ್ವರೂಪವನ್ನು ಪಡೆದುಕೊಂಡಿರುತ್ತಿತ್ತಲ್ಲವೇ? "ಜಾತೀಯತೆವಿರೋಧಿ, ಬಂಡವಾಳಶಾಹಿವಿರೋಧಿ" ಎಂಬ ಡಿಎಸ್ಸೆಸ್‌ನ ಧ್ಯೇಯೋದ್ದೇಶವನ್ನು ಇಂದು ವಿಶ್ವಾದ್ಯಂತ ಅಂಬೇಡ್ಕರ್ ಹಾಗೂ ಮಾರ್ಕ್ಸ್ ಸಿದ್ಧಾಂತಗಳನ್ನಾಧರಿಸಿ ಶೋಷಣೆ, ತಾರತಮ್ಯಗಳನ್ನು ವಿಮರ್ಶೆಗೊಳಪಡಿಸುವ ಕೆಲಸವಾಗುತ್ತಿದೆ. ಪ್ರತಿ ತಿಂಗಳು ಈ ವಿಷಯವಾಗಿ ಜಗತ್ತಿನ ಯಾವುದಾದರೂ ಮೂಲೆಯಿಂದ ಒಂದಲ್ಲ ಒಂದು ಪುಸ್ತಕ ಹೊರಬರುತ್ತಲೇ ಇದೆ. ಆದರೆ, ಕನ್ನಡ ಮಾತ್ರ ಅದಾವುದನ್ನೂ ಲೆಕ್ಕಿಸದೆ, ಜಡವಾಗಿಬಿಟ್ಟಂತಿದೆ.

ಕೊನೆಯದಾಗಿ, ಡಿ.ಆರ್. ನಾಗರಾಜ್ ಅವರಂತಹ ವಿಮರ್ಶಕರು ಹಿಂದಿನ ಶತಮಾನದ ಕೊನೆಯ ದಶಕದಲ್ಲಿ ತಮ್ಮ 'ದಿ ಫ್ಲೇಮಿಂಗ್ ಫೀಟ್' (ಕನ್ನಡದಲ್ಲಿ 'ಉರಿ ಚಮ್ಮಾಳಿಗೆ') ಕೃತಿಯ ಮೂಲಕ ದಲಿತ ಚಳವಳಿ ಹಾಗೂ ದಲಿತ ಸಾಹಿತ್ಯದ ಅಧ್ಯಯನದ ಮೂಲಕ ಹೊಸ ಬಗೆಯ ಕಲಾಮೀಮಾಂಸೆಗೆ ಬುನಾದಿ ಒದಗಿಸಿದರಾದರೂ, ಅವರ ನಂತರದ ತಲೆಮಾರಿನವರಲ್ಲಿ ಅದನ್ನು ಬೆಳೆಸುವಷ್ಟು ಅಕಡೆಮಿಕ್ ತರಬೇತಿಯಾಗಲಿ, ಮಹತ್ವಾಕಾಂಕ್ಷೆಯಾಗಲಿ ಇಲ್ಲವಾದದ್ದರಿಂದಾಗಿ, ಇಂದಿಗೂ ಡಿ.ಆರ್. ಹುಟ್ಟಿ ಬರಲಿ, ಲಂಕೇಶ್ ಹುಟ್ಟಿ ಬರಲಿ, ತೇಜಸ್ವಿ ಹುಟ್ಟಿ ಬರಲಿ ಎಂಬ ಕೂಗು ಸಾಮಾಜಿಕ ಮಾಧ್ಯಮಗಳಲ್ಲಿ ಅವರ ಹುಟ್ಟಿದ ದಿನಗಳಂದೋ, ಗತಿಸಿದ ದಿನಗಳಂದೋ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿರುತ್ತದೆ. ಇದು ಏನನ್ನು ಸೂಚಿಸುತ್ತದೆ? ಇಂದು ಕರ್ನಾಟಕದ ವಿಶ್ವವಿದ್ಯಾಲಯಗಳು, ಅಲ್ಲಿನ ಮಾನವಿಕ ವಿಭಾಗಗಳು